## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 10.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

ರಾಜೀ ಡಿಕ್ರಿ ಪ್ರಕಾರ ನನ್ನ ತಾಯಿಗೆ ಬಂದ ಆಸ್ತಿಯನ್ನು ಅವರು ಖರೀದಿಗೆ ನೀಡಿದ್ದು ಸದರಿ ಖರೀದಿದಾರರು ಅದನ್ನು ಪುನಃ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ಸದರಿ ಆಸ್ತಿಯನ್ನು ಕುಲಕರ್ಣಿ ಕುಟುಂಬದವರು ದಿಃ12/08/2013 ರಂದು ನೊಂದಾಯಿತ ಖರೀದಿ ಪತ್ರದ ಪ್ರಕಾರ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಿಮ್ಮ ತಾಯಿ ತನ್ನ ಹಿಸ್ಸೆಗೆ ಬಂದಿದೆ ಎಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ರಾಜೀಯಾದ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಮ್ಮ ತಾಯಿ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮ್ಮ ಮಾವನವರು ಹಿಸ್ಸೆ ಕೊಡುತ್ತೇವೆ ಎಂದು ಹೇಳಿದ್ದ ಕಾರಣ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರಿಂದ 3 ದಾವಾ ಆಸ್ತಿಗಳನ್ನು ವಾಟ್ನಿ ಮಾಡಿಕೊಂಡು ಪ್ರತ್ಯೇಕವಾಗಿ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ಆ ಬಗ್ಗೆ ನನ್ನ ತಾಯಿಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಿಪಿ.5 ರ ಪ್ರಕಾರ ಅವರು ವ್ಯವಸ್ಥಾ ಪತ್ರ ಮಾಡಿಕೊಂಡು ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಸ್ಥಾ ಪತ್ರದ ಪ್ರಕಾರ ಬೇರೆ ಬೇರೆ ಉತಾರಗಳು ಆದವು ಎಂದರೆ ನನಗೆ ಗೊತ್ತಿಲ್ಲ. ನಿಪಿ.7 ರ ಪ್ರಕಾರ ಬೇರೆ ಬೇರೆ ಉತಾರಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ.

2. ವಿಪಿಸಿ ನಂ.122 ಇದು ನನ್ನ ಅಜ್ಜನ ಆಸ್ತಿಯಾಗಿದೆ. ಸದರಿ ಆಸ್ತಿ ಸದಾಶಿವಯ್ಯ ಶಿವಲಿಂಗಯ್ಯ ಮಲ್ಲಸಮುದ್ರ ಇವರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಹೇಗೆ ಬಂತು ಹಾಗೂ ಯಾವ ಹೆಸರಿನಲ್ಲಿದೆ ಹಾಗೂ ಅದನ್ನು ಯಾರು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ರಾಜೀ ಡಿಕ್ರಿಯಾದ ನಂತರ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ರಾಜೀ ಡಿಕ್ರಿಗೂ ಹಾಗೂ ಸದರಿ ಆಸ್ತಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಹೊಲದ ಉತ್ಪನ್ನ ಎಷ್ಟು ಹಾಗೂ ಯಾವ ಹೊಲದಿಂದ ಬಂತು ಎಂದರೆ ಸಾಕ್ಷಿ ಅದನ್ನು ಅವರೇ ಮಾಡಿಕೊಂಡು ಬಂದಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ರಾಜೀ ಡಿಕ್ರಿ ಪೂರ್ವದಲ್ಲಿ ಸರ್ವೆ ನಂ.197 ರಲ್ಲಿ ಪ್ಲಾಟ್ ಗಳು ಆಗಿದ್ದವು ಎಂದರೆ

ಸರಿ. ಸದರಿ ಪ್ಲಾಟ್ ಗಳನ್ನು ಪ್ರತಿವಾದಿ ನಂ.1 ರಿಂದ 3 ರವರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟ್‌ಗಳನ್ನು ಪ್ರತಿವಾದಿ ನಂ.1 ರಿಂದ 3 ರವರು ಸ್ವಲ್ಪ ಜನರಿಗೆ ಮಾರಾಟ ಮಾಡಲು ಒಪ್ಪಿ ಖರೀದಿ ಕರಾರುಪತ್ರ ಸಹ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಾಜೀ ಡಿಕ್ರಿ ಪ್ರಕಾರ 4 ಗುಂಟೆ 4 ಆಣೆ ಅಂದರೆ 19, 54, 55 ಮತ್ತು 56 ಪ್ಲಾಟ್ ಗಳು ಪ್ರತಿವಾದಿ ನಂ.3 ಇವರಿಗೆ ಬಂದವು ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ ಶ್ರೀ.ಆ್‌ರ್ ಜೆ ಕೆ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**